**Com.O.S.** 60/2022

**PW**-2

**ಸಾಕ್ಷಿಯನ್ನು ದಿನಾಂಕ 14.8.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎಂ.ಎ ವಕೀಲರಿಂದಃ**

ಪ್ರತಿವಾದಿ ಆಸ್ಪತ್ರೆಯೊಂದಿಗೆ ಆಗಿದ್ದ ಎಂ.ಓ.ಯು ನ ಬಗ್ಗೆ ಮಾಹಿತಿ ನನಗೆ ಇದೆ. ನಿಪಿ8 ರಂತೆ ಜುಲೈ 2020 ರಿಂದ ಜೂನ್ 2021 ವರೆಗೆ ನಾವು ಪ್ರತಿವಾದಿ ಆಸ್ಪತ್ರೆಯೊಂದಿಗೆ ವ್ಯವಹಾರ ಮುಂದುವರೆಸಬೇಕಿತ್ತು ಎಂದರೆ ನಿಜ. ನಾವು ಅದೇ ರೀತಿ ವ್ಯವಹಾರ ಮಾಡಿದ್ದೇವೆ. ಪ್ರತಿವಾದಿಯೊಂದಿಗೆ ನಾವು ಎಂ.ಓ.ಯು ರದ್ದುಗೊಳಿಸಿಲ್ಲ, ಆದರೆ ಪ್ರತಿವಾದಿಯು ಆಸ್ಪತ್ರೆ ನಡೆಸುತ್ತಿದ್ದ ಸ್ಥಳದ ಸ್ವಾಧೀನವನ್ನು ವಕ್ಫ್ ಬೋರ್ಡನವರು ವಶಕ್ಕೆ ಪಡೆದಿದ್ದಾರೆ. ನಿಪಿ2 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ವಕ್ಫ್ ಬೋರ್ಡ ಮತ್ತು ಪ್ರತಿವಾದಿಯ ನಡುವೆ ಗಲಾಟೆಯಾದಾಗ ರದ್ದುಪಡಿಸಿದ್ದೇವೆ. 2021 ಅಥವಾ 2022 ರಲ್ಲಿ ಆ ರೀತಿ ವಕ್ಫ್ ಬೋರ್ಡನವರು ಬಂದು ಗಲಾಟೆ ಮಾಡಿರುತ್ತಾರೆ. ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನಿಪಿ2 ರಂತೆ ದಿನಾಂಕ 30.11.2020 ರಂದು ಎಂ.ಓ.ಯು ರದ್ದುಪಡಿಸಿದ್ದೇವೆ ಎಂದರೆ ನಿಜ. ಒಂದು ವರ್ಷಕ್ಕಿಂತ ಮೊದಲೇ ರದ್ದುಪಡಿಸಿದರೆ ಆಸ್ಪತ್ರೆಯನ್ನು ಯಾರು ನೋಡಿಕೊಳ್ಳಬೇಕೆಂದು ಮತ್ತು ಖರ್ಚನ್ನು ಯಾರು ನೋಡಿಕೊಳ್ಳಬೇಕೆಂದು ಎಂ.ಓ.ಯು ನಲ್ಲಿ ನಮೂದಿಲ್ಲ. ವಕ್ಫ್ ಬೋರ್ಡನವರು ಮತ್ತು ಜಿಲ್ಲಾಡಳಿತದವರು ಆಸ್ತಿಯನ್ನು ಸ್ವಾಧೀನಕ್ಕೆ ಪಡೆಯುತ್ತಿದ್ದೇವೆ, ಆಚೆ ಹೋಗಿ ಎಂದು ಹೇಳಿದ್ದರಿಂದ ನಾವು ಎಂ.ಓ.ಯು ನ್ನು ರದ್ದುಪಡಿಸಿದ್ದೇವೆ. ಎಂ.ಓ.ಯು ಪ್ರಕಾರ ವಾದಿ ಮತ್ತು ಪ್ರತಿವಾದಿ ಶೇ.50 ರಷ್ಟು ಲಾಭಾಂಶ ಪಡೆಯಲು ಅರ್ಹರಿದ್ದಾರೆ. ನಾವು ಖಾಲಿ ಮಾಡಿಕೊಂಡು ಹೋಗುವಾಗ ಬೀಬಿ ಆಯೇಶಾ ಆಸ್ಪತ್ರೆಯ ವೈದ್ಯಕೀಯ ಉಪಕರಣಗಳನ್ನು ತೆಗೆದುಕೊಂಡು

ಹೋಗಿದ್ದೇವೆ ಎಂದರೆ ಸರಿಯಲ್ಲ. ನಾವು ದಾವೆಯಲ್ಲಿ ಕೇಳಿರುವ 37,86,332/- ರೂ. ನಮ್ಮ ಲಾಭಾಂಶ ಎಂದು ಹೇಳಿರುವುದು ತಪ್ಪಿದೆ ಎಂದರೆ ಸರಿಯಲ್ಲ. ನಮ್ಮ ಪರಿಹಾರದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಆ ಎಲ್ಲ ದಾಖಲೆಗಳು ಪ್ರತಿವಾದಿ ಆಸ್ಪತ್ರೆಯಲ್ಲಿದ್ದ ಸಿಸ್ಟಂನಲ್ಲೇ ಉಳಿದುಕೊಂಡಿದೆ. ಕೋವಿಡ್-19 ಕಾಲಕ್ಕೆ ಸರ್ಕಾರದಿಂದ ಕೊಟ್ಟ ಪರಿಹಾರ ಹಣ ನಮ್ಮ ಆಸ್ಪತ್ರೆಯ ಬ್ಯಾಂಕ್ ಖಾತೆಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನಮ್ಮ ಮತ್ತು ಪ್ರತಿವಾದಿಯರ ಜಂಟಿ ಖಾತೆಗೆ ಬಂದಿದೆ. ನವೆಂಬರ್ 2020ರ ಬಳಿಕ ನಾವು ಪ್ರತಿವಾದಿಯೊಂದಿಗೆ ಆಸ್ಪತ್ರೆ ನಡೆಸಿಲ್ಲ ಎಂದರೆ ನಿಜ. ನಾವೇ ಸ್ವತಃ ಪ್ರತಿವಾದಿ ಸಂಸ್ಥೆಯೊಂದಿಗಿನ ವ್ಯವಹಾರವನ್ನು ಮುಕ್ತಾಯ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ಪತ್ರೆ ವಕ್ಫ್ ಬೋರ್ಡ್‌ನ ಆಸ್ತಿಯಲ್ಲಿ ಲೀಸ್ ಮೇಲೆ ನಡೆಯುತ್ತಿತ್ತು ಎಂದರೆ ನಮಗೆ ಗೊತ್ತಿಲ್ಲ. ವಕ್ಫ್ ಟ್ರಿಬ್ಯುನಲ್ಲಿನಲ್ಲಿ ಬಾಕಿ ಇರುವ ಅರ್ಜಿ ಸಂಖ್ಯೆ 9/2021 ಪ್ರಕರಣದಲ್ಲಿ ನಮ್ಮ ಆಸ್ಪತ್ರೆಯನ್ನು ಸಹ ಸೇರಿಸಲು ಅರ್ಜಿ ಹಾಕಿದ್ದೇವೆ ಎಂದರೆ ಸರಿಯಲ್ಲ. ವಕ್ಫ್ ಟ್ರಿಬ್ಯುನಲ್ಲಿನ ಪ್ರಕರಣದ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ನಿಪಿ1ನ್ನು ಮಾಡುವ ಕಾಲಕ್ಕೆ ಮೀಟಿಂಗ್ ಯಾವ ದಿನಾಂಕ ನಡೆದಿದೆ ಎಂದು ನೆನಪಿಲ್ಲ. ನಿಪಿ1ರಲ್ಲಿ 2.11.2021 ಎಂದು ಕೈತಪ್ಪಿನಿಂದ ದಿನಾಂಕ ನಮೂದಾಗಿರಬಹುದು. ಪ್ರತಿವಾದಿಯು ನಮಗೆ ಯಾವುದೇ ಹಣ ನೀಡಬೇಕಾಗಿಲ್ಲದಿದ್ದರೂ ಸಹ ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ಕೇಸು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಿಪಿ2ನ್ನು ಪ್ರತಿವಾದಿ ಸಂಸ್ಥೆಗೆ ಪೋಸ್ಟ್ ಮೂಲಕ ಕಳುಹಿಸಿರುತ್ತೇವೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇವೆ.

ಪ್ರತಿವಾದಿ ಸಂಸ್ಥೆಯ ಇಕ್ಬಾಲ್ ಅಹ್ಮದ್ ರವರು ಕೋವಿಡ್-19 ಚಿಕಿತ್ಸೆಗೆ ಬೀಬಿ ಆಯೇಶಾ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದಾಗ ನಿಪಿ2ಕ್ಕೆ ಅವರ ಸಹಿ ಪಡೆದಿರುತ್ತಾರೆ ಎಂದರೆ

ಇರಬಹುದು. ಅವರಿಗೆ ಕೋವಿಡ್-19 ರೋಗ ತಗುಲಿ ಜ್ಞಾನ ತಪ್ಪಿದ್ದಾಗ ಅವರ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ6 ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ9 ದಾಖಲೆ ಜುಲೈ 2020 ರಿಂದ ನವೆಂಬರ್ 2020 ರ ಅವಧಿಗೆ ಸಂಬಂಧಪಟ್ಟಿದ್ದು ಎಂದರೆ ಇರಬಹುದು. ನನಗೆ ಆ ಬಗ್ಗೆ ಮಾಹಿತಿ ಇದೆ. ಜುಲೈ 2020 ರಿಂದ ನವೆಂಬರ್ 2020 ರ ಅವಧಿಯಲ್ಲಿ ಒಟ್ಟು 4 ಕೋಟಿ ವ್ಯವಹಾರ ನಡೆದಿದೆ ಎಂದರೆ ಸರಿಯಲ್ಲ.

ಆ ಹಣದ ಪೈಕಿ ನಾವು ಶೇ.50 ರಷ್ಟನ್ನು ಪ್ರತಿವಾದಿ ಆಸ್ಪತ್ರೆಗೆ ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ನವೆಂಬರ್ 2020 ರಲ್ಲಿ ನಾವು ಖಾಲಿ ಮಾಡುವಾಗ ಪ್ರತಿವಾದಿ ಸಂಸ್ಥೆಗೆ ಸಂಬಂಧಪಟ್ಟ ಬೆಲೆ ಬಾಳುವ ಉಪಕರಣಗಳನ್ನು ನಾವು ತೆಗೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ಫೆಬ್ರವರಿ 2021 ರಲ್ಲಿ ವಕ್ಫ್ ಬೋರ್ಡ ಮತ್ತು ಪ್ರತಿವಾದಿ ಸಂಸ್ಥೆ ನಡುವೆ ವ್ಯಾಜ್ಯ ಪ್ರಾರಂಭವಾಗಿತ್ತು ಎಂದರೆ ಸರಿಯಲ್ಲ.

ಈ ವೇಳೆಗೆ ಪ್ರತಿವಾದಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿದ್ದ ಕಾರಣ ಸಮಯ ನೀಡಲು ನಿರಾಕರಿಸಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು